ಬಗ್ಗೆ ಹಾಗೂ ಹೆಚ್ಚು ಧಾರಣೆ ಬಗ್ಗೆ, ಟೈಮ್ ಬಗ್ಗೆ ಸರಿಯಾಗಿ ಸಪ್ಲೈ ಮಾಡದೆ ಇರುವ ಬಗ್ಗೆ, ಕಲಬೆರಕೆ ಯಾರು ಮಾಡುತ್ತಾರೊ ಅದರ ಬಗ್ಗೆ ಕೊಡಬಹುದು. ಇನ್ನು ಡೈರಿ ಅವ್ಯವಹಾರಗಳ ಬಗ್ಗೆ ಶಾಸಕರನ್ನು ಕರೆಯಬೇಕೆಂದು ಹೇಳಿದ್ದಾರೆ. ನಾನು ಖಂಡಿತವಾಗಿ ಒಂದು ಸಭೆ ಕರೆದು ಅವ್ಯವಹಾರಗಳನ್ನು ಸರಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಆರ್. ದಯಾನಂದರಾವ್:– ಕೆ.ಎಂ.ಎಫ್.ನಿಂದ ಬರುವಂತಹ ಹಾಲಿಗೆ ನೀರು ಬೆರೆಸುವುದು ವಾಡಿಕೆ ಆಗಿದೆ. ಇದು ಆಕಸ್ಮಾತ್ ಆಗಿ ಡೈರಿಯಲ್ಲಿ ನೀರು ಬೆರೆಸುತ್ತಾರೋ ಅಥವಾ ಕೆ.ಎಂ.ಎಫ್. ಬೂತ್‌ಗಳಲ್ಲಿ ನೀರು ಬೆರೆಸುತ್ತಾರೋ ಗೊತ್ತಿಲ್ಲ. ಈ ಬಗ್ಗೆ ಸಾರ್ವಜನಿಕರಿಂದ ದೂರುಗಳು ಇವೆ. ಇದರಲ್ಲಿ ಯಾರು ತಪ್ಪಿತಸ್ಥರಿದ್ದಾರೆ ಅವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

10.40 ಎ.ಎಂ.

ಶ್ರೀ ಕೆ.ಎನ್. ನಾಗೇಗೌಡ:– ಮಾನ್ಯ ಸಭಾಧ್ಯಕ್ಷರೇ, ಎಲ್ಲೆಲ್ಲಿ ಮಿಲ್ಕ್ ವೆಂಡಿಂಗ್ ಬೂತ್‌ಗಳಿವೆಯೋ ಅದರಲ್ಲಿಯೂ ಮದರ್ ಡೈರಿ ಬಗ್ಗೆ ಹೇಳಿದ್ದಾರೆ ಅಲ್ಲಿ ಸೂಕ್ತ ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಅಂಥ ದೂರುಗಳು ಇದ್ದರೆ, ಅವುಗಳನ್ನು ಕುಂದುಕೊರತೆ ಸಮಿತಿಗೆ ಸಲ್ಲಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ರಾಜ್ಯದಲ್ಲಿರುವ ಸಹಕಾರ ಸಂಘಗಳು ಮತ್ತು ಬ್ಯಾಂಕುಗಳು

(1712): ಶ್ರೀ ಯಜಮಾನ್ ಮೋತಿ ವೀರಣ್ಣ (ದಾವಣಗೆರೆ):– ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯದಲ್ಲಿ ಇರುವ ಒಟ್ಟು ಸಹಕಾರ ಸಂಘಗಳು ಮತ್ತು ಬ್ಯಾಂಕುಗಳು ಎಷ್ಟು;

ಆ. ಸದರೀ ಸಂಘ ಹಾಗೂ ಬ್ಯಾಂಕುಗಳಿಂದ ಸಾರ್ವಜನಿಕರಿಗೆ ಆಗುವ ಉಪಯೋಗಗಳಾವುವು ? (ಜಿಲ್ಲಾವಾರು ವಿವರ ನೀಡುವುದು).

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು):–

ಅ. ರಾಜ್ಯದಲ್ಲಿ 31-03-1992ರ ಅಂತ್ಯಕ್ಕೆ 25,249 ಸಹಕಾರ ಸಂಘಗಳು ಮತ್ತು 424 ಬ್ಯಾಂಕುಗಳು ಇರುತ್ತವೆ.

ಆ. ರೈತರ ಹಾಗೂ ಸಾರ್ವಜನಿಕರ ಆರ್ಥಿಕ ಅಭಿವೃದ್ಧಿಯಲ್ಲಿ ಸಹಕಾರ ಸಂಘಗಳು ಮಹತ್ವದ ಪಾತ್ರ ವಹಿಸುತ್ತಿವೆ. ಆಯಾ ಸಂಘಗಳು ಉಪ ನಿಯಮಗಳಲ್ಲಿ ನಮೂದಿಸಿರುವ ಉದ್ದೇಶಗಳನುಸಾರ ವಿವಿಧ ಧ್ಯೇಯಗಳನ್ನು ಸದಸ್ಯರ ಉಪಯೋಗಕ್ಕಾಗಿ ನಿರ್ವಹಿಸುತ್ತಿವೆ. ಜಿಲ್ಲಾವಾರು ಪಟ್ಟಿಯನ್ನು ಲಗತ್ತಿಸಿದೆ.

ಅನುಬಂಧ

ಕರ್ನಾಟಕ ರಾಜ್ಯದಲ್ಲಿ ಜಿಲ್ಲಾವಾರು ವಿವಿಧೋದ್ದೇಶಗಳ ಸಹಕಾರ ಸಂಘಗಳ ವಿವರಗಳು

ಕ್ರ. ಸಂ.	ಜಿಲ್ಲೆಗಳು	ಒಟ್ಟು ಸಹಕಾರ ಬ್ಯಾಂಕುಗಳು	ಇದರಲ್ಲಿ				
			ಪ್ರಾ. ಕೃಷಿ ಪತ್ತಿನ ಸಂಘಗಳು	ತಾಲ್ಲೂಕು ಮಾರಾಟ ಸಂಘಗಳು	ಜಿಲ್ಲಾ ಸಹಕಾರ ಬ್ಯಾಂಕ್	ಪ್ರಾ. ಕೃಷಿ ಗ್ರಾಮೀಣ ಅಭಿವೃದ್ಧಿ ಬ್ಯಾಂಕ್	ಪಟ್ಟಣ ಬ್ಯಾಂಕುಗಳು
1	ಬೆಂಗಳೂರು ನಗರ	1,975	49	4	1	3	43
2	ಬೆಂಗಳೂರು (ಗ್ರಾ)	1,212	157	8	–	8	3
3	ಚಿತ್ರದುರ್ಗ	1,132	216	9	1	9	12
4	ಕೋಲಾರ	1,452	219	11	1	11	2
5	ಶಿವಮೊಗ್ಗ	932	233	9	1	10	6
6	ತುಮಕೂರು	1,239	249	10	1	10	9
7	ಬೆಳಗಾಂ	2,550	475	11	1	10	40
8	ಬಿಜಾಪುರ	2,152	409	11	1	11	22
9	ಧಾರವಾಡ	2,580	393	20	1	17	39
10	ಕಾರವಾರ	803	159	9	1	11	9
11	ಚಿಕ್ಕಮಗಳೂರು	407	113	7	1	8	–
12	ಮಡಿಕೇರಿ	411	73	13	1	3	3
13	ಹಾಸನ	903	167	8	1	8	4
14	ಮಂಡ್ಯ	1,201	221	7	1	7	1
15	ಮಂಗಳೂರು	1,181	167	8	1	8	11
16	ಮೈಸೂರು	1,575	279	11	1	11	9
17	ಬಳ್ಳಾರಿ	865	163	8	1	8	2
18	ಗುಲ್ಬರ್ಗಾ	1,248	232	10	1	10	1
19	ಬೀದರ್	754	171	5	1	5	3
20	ರಾಯಚೂರು	1,101	205	8	1	9	6
	ಒಟ್ಟು	25,673	4,350	187	19	177	225

ಶ್ರೀ ವೈ. ಮೋತಿ ವೀರಣ್ಣ:– ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಸಹಕಾರ ಸಚಿವರು ರಾಜ್ಯದಲ್ಲಿ

ಮತ್ತು ಜಿಲ್ಲೆಯಲ್ಲಿರತಕ್ಕಂಥ ಸಹಕಾರಿ ಸಂಸ್ಥೆಗಳ ಮತ್ತು ಬ್ಯಾಂಕ್‌ಗಳ ಅಂಕಿಅಂಶಗಳನ್ನು ಒದಗಿಸಿದ್ದಾರೆ. ರೈತರ ಹಾಗೂ ಸಾರ್ವಜನಿಕರ ಆರ್ಥಿಕ ಅಭಿವೃದ್ಧಿಗೆ ಸಹಕಾರಿ ಸಂಸ್ಥೆಗಳು ಬಹಳ ತೃಪ್ತಿಕರವಾಗಿ ಕೆಲಸ ಮಾಡುತ್ತಿದೆ ಎಂದು ಅವರು ಉತ್ತರದಲ್ಲಿ ಕಾಣಿಸಿದ್ದಾರೆ. ನನ್ನ ಕ್ಷೇತ್ರಕ್ಕೆ ಸೀಮಿತವಾಗಿ ನಾನು ಹೇಳುವುದಿದ್ದರೆ ರೈತರ ಸಹಕಾರ ಸೇವಾ ಸಂಘಗಳು ಮತ್ತು ಜನತಾ ಬಜಾರ್‌ಗಳು, ಸಹಕಾರ ತತ್ವಗಳ ಆಧಾರದ ಮೇಲೆ ತಮ್ಮ ಉದ್ದೇಶಗಳನ್ನು ಜಾರಿಗೊಳಿಸತಕ್ಕಂಥಾದ್ದರಲ್ಲಿ ಕಾಂಪ್ಲೆಕ್ಸ್ ಕಟ್ಟಡಗಳನ್ನು ಕಟ್ಟಿ, ಹೆಚ್ಚಿನ ದರದಲ್ಲಿ ಬಾಡಿಗೆಯನ್ನು ಕೊಡುವುದರ ಮೂಲಕ ಆ ಒಂದು ತತ್ವದ ಕಾರ್ಯಾಚರಣೆಗೆ ವಿಮುಖವಾಗಿ ನಡೆದುಕೊಳ್ಳುತ್ತಾ ಇದ್ದಾರೆ. ಇಂಥ ವಿಚಾರ ಮಾನ್ಯ ಸಚಿವರ ಗಮನಕ್ಕೆ ಬಂದಿದೆಯೇ ? ಬಂದಿದ್ದಲ್ಲಿ ಯಾವ ಕ್ರಮಗಳನ್ನು ತೆಗೆದುಕೊಂಡಿದ್ದಾರೆ ಎಂಬ ಪ್ರಶ್ನೆಯನ್ನು ಕೇಳುತ್ತಾ ಅದಕ್ಕೆ ಸೂಕ್ತ ಉತ್ತರವನ್ನು ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:– ಅಂಥಾದ್ದು ಏನೂ ನನ್ನ ಗಮನಕ್ಕೆ ಬಂದಿಲ್ಲ. ಒಂದು ವೇಳೆ ನಿರ್ದಿಷ್ಟವಾಗಿ ನನ್ನ ಗಮನಕ್ಕೆ ತಂದರೆ, ಆ ಕುರಿತು ಏನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೋ ಅದನ್ನು ಕಾನೂನು ಪ್ರಕಾರವಾಗಿ ತೆಗೆದುಕೊಳ್ಳುತ್ತೇನೆ.

ಶ್ರೀ ವೈ. ಮೋತಿ ವೀರಣ್ಣ:– ಮಾನ್ಯ ಸಚಿವರ ಗಮನಕ್ಕೆ ಆ ವಿಚಾರವನ್ನು ತರುತ್ತೇನೆ. ಅದೇ ರೀತಿಯಲ್ಲಿ ಕನ್ಸೂಮರ್ಸ್ ಕೋ – ಆಪರೇಟಿವ್ ಸೊಸೈಟಿಗಳು ಮತ್ತು ಪ್ರೈಮರಿ ಸೊಸೈಟೀಸ್‌ಗಳಿಗೆ ಆಹಾರ ವಿತರಣೆ ಮಾಡುವುದಕ್ಕೋಸ್ಕರವಾಗಿ ಕಳುಹಿಸಿ ಕೊಟ್ಟಿದ್ದನ್ನು ಹೋಲ್‌ಸೇಲ್ ಪಾಯಿಂಟ್‌ನಿಂದ ವಿತರಣೆ ಮಾಡಿದ್ದು ಗ್ರಾಮಾಂತರಗಳಿಗೆ ಮುಟ್ಟುತ್ತಾ ಇಲ್ಲ, ಇದು ಮಾನ್ಯ ಸಚಿವರ ಗಮನಕ್ಕೆ ಬಂದಿದೆಯೇ ? ಹಸಿರು ಕಾರ್ಡ್‌ಗಳ ಮೂಲಕ ಎಣ್ಣೆ ಮತ್ತಿತರ ಪದಾರ್ಥಗಳು ಕೊಡುತ್ತಿದ್ದೀರಿ ಅದು ಜನರಿಗೆ ಮುಟ್ಟುತ್ತಾ ಇಲ್ಲ. ಎಲ್ಲಿ ಅದು ಹೋಲ್‌ಸೇಲ್ ಪಾಯಿಂಟ್‌ನಲ್ಲಿ ವಿತರಣೆಯಾಗುತ್ತದೆ ಅಲ್ಲಿಯೇ ಅರ್ಧಕ್ಕಿಂತ ಹೆಚ್ಚು ಪ್ರಮಾಣದ ಗೂಡ್ಸ್‌ಗಳು ಪಾಯಿಂಟ್‌ನಲ್ಲಿ ವಿತರಣೆಯಾಗುತ್ತದೆ. ಅಲ್ಲಿಯೇ ಅರ್ಧಕ್ಕಿಂತ ಹೆಚ್ಚು ಪ್ರಮಾಣದ ಗೂಡ್ಸ್‌ಗಳು ಮಾರಾಟವಾಗಿ, ಯಾವ ಸಹಕಾರ ತತ್ವಗಳ ಮೂಲಕ ಜನರಿಗೆ ಮುಟ್ಟಿಸಬೇಕೆಂಬ ಉದ್ದೇಶವಿದೆ. ಅದು ಸಫಲವಾಗುತ್ತಾ ಇಲ್ಲ. ಇದು ಮಾನ್ಯ ಸಚಿವರ ಗಮನಕ್ಕೆ ಬಂದಿದ್ದರೆ ಅದರ ಬಗ್ಗೆ ಕ್ರಮ ತೆಗೆದುಕೊಂಡಿದ್ದಾರೆಯೇ ಎಂಬ ಬಗ್ಗೆ ದಯಮಾಡಿ ತಿಳಿಸಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:– ಮಾನ್ಯ ಸದಸ್ಯರು ಕೂಡ ಕೋ–ಆಪರೇಟಿವ್ ಫೀಲ್ಡ್‌ನಲ್ಲಿ ಸಾಕಷ್ಟು ಕೆಲಸ ಮಾಡಿದ್ದಾರೆ. ನಮ್ಮಲ್ಲಿ 25 ಸಾವಿರಕ್ಕಿಂತಲೂ ಹೆಚ್ಚಿನ ಕೋ–ಆಪರೇಟಿವ್ ಸೊಸೈಟಿಗಳು ಇವೆ. ಅದರಲ್ಲಿ 7–8 ಸಾವಿರಗಳಷ್ಟು ಡಿಫಾಲ್ಟ್ ಇವೆ. ಉಳಿದಂಥ 17–18 ಸಾವಿರ ಸೊಸೈಟಿಗಳು ವಿವಿಧ ಉದ್ದೇಶಗಳನ್ವಯ ಕೆಲಸ ಮಾಡುತ್ತಾ ಇವೆ. ತಮಗೆಲ್ಲರಿಗೂ ಗೊತ್ತಿರುವ ಹಾಗೆ ಕನ್ಸೂಮರ್ಸ್ ಕೋ – ಆಪರೇಟಿವ್ ಸೊಸೈಟೀಸ್ ಮತ್ತು ಹಳ್ಳಿಗಳಲ್ಲಿರತಕ್ಕಂಥ ವ್ಯವಸಾಯ ಸಹಕಾರಿ ಸಂಘಗಳು ಅನೇಕ ಸಾರಿ ಈ ತಾಲ್ಲೂಕುಮಟ್ಟದಿಂದ ತೆಗೆದುಕೊಂಡು ಹೋಗಿ, ಹಳ್ಳಿಗಳಿಗೆ ಮುಟ್ಟಿಸುವುದೇ ಇಲ್ಲ. ಆದ್ದರಿಂದ ಅಲ್ಲಿಯ ಮಾನ್ಯ ಶಾಸಕರು ಇಂಥ ಸೊಸೈಟಿಯವರು ವಸ್ತುಗಳನ್ನು ಸರಿಯಾಗಿ ಮುಟ್ಟಿಸುತ್ತಾ ಇಲ್ಲ ಎಂದು ಕಂಡು ಬಂದು, ಅದನ್ನು ಹೇಳಿದರೆ, ಖಂಡಿತವಾಗಿ ಅಂಥ ಸೊಸೈಟಿಗಳ ಮೇಲೆ ಆಕ್ಷನ್ ತೆಗೆದುಕೊಳ್ಳುತ್ತೇವೆ.

ರಾಜ್ಯದಲ್ಲಿ ಸಹಕಾರ ಸಂಘಗಳಿಗೆ ಚುನಾವಣೆ

(1762): ಶ್ರೀ ಡಿ. ಹಲಗೇಗೌಡ (ಪಾಂಡವಪುರ):– ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?